'ಬುದ್ಧನ ಆರ್ಯಶಿಷ್ಯರ ಪವಿತ್ರ ಸಂಘ ಸರಿಮಾರ್ಗದಮೇಲೆ ಸ್ಥಾಪಿತವಾಯಿತು. ಬುದ್ಧರ ಆರ್ಯಶಿಷ್ಯರ ಪವಿತ್ರ ಸಂಘ ನೇರ ಮಾರ್ಗದ ಮೇಲೆ ಸ್ಥಾಪಿತವಾಯಿತು. ಬುದ್ಧರ ಆರ್ಯಶಿಷ್ಯರ ಸಂಘ ನ್ಯಾಯಮಾರ್ಗದ ಮೇಲೆ ಸ್ಥಾಪಿತವಾಯಿತು/ ಬುದ್ಧರ ಆರ್ಯಶಿಷ್ಯರ ಸಂಘ ತಕ್ಕ ಮಾರ್ಗದ ಮೇಲೆ ಸ್ಥಾಪನೆಯಾಯಿತು.

'ನಾಲ್ಕು ಜೊತೆ ಆರ್ಯವ್ಯಕ್ತಿಗಳನ್ನೊಳಗೊಂಡ ಎಂಟು ಆಧ್ಯಾತ್ಮಿಕವಾಗಿ ಪರಿವರ್ತನೆಗೊಂಡ ವ್ಯಕ್ತಿಗಳ, ಈ ಬುದ್ಧನ ಪವಿತ್ರ ಸಂಘದ ಆರ್ಯಶಿಷ್ಯರು ಸದಾಕಾಲ ಅತಿಥಿಸತ್ಕಾರ ಮತ್ತು ಅರ್ಪಣೆಗಳಿಗೆ ಯೋಗ್ಯರಾದವರು, ಕೊಡುಗೆ ಮತ್ತು ಗೌರವಪೂರ್ಣ ನಮನಗಳಿಗೆ ಅರ್ಹರಾದವರು ಮತ್ತು ಜಗತ್ತಿಗೆ ಅಸದೃಶ್ಯವಾದ ಅರ್ಹತೆಯುಳ್ಳ ಅಸಾಧಾರಣರು.'

**ಅಟ್ಠವಿಸತಿ ಬುದ್ಧವಂದನಾ : ೨೮ ಬುದ್ಧರಿಗೆ ವಂದನೆ.**

ಬೇರೆ ಬೇರೆ ಕಾಲಗಳಲ್ಲಿ ಈ ಭೂಮಿಯ ಮೇಲೆ ಹುಟ್ಟಿ ಹೋದ ಇಪ್ಪತ್ತೆಂಟು ಬುದ್ಧರ ಹೆಸರುಗಳನ್ನು ಪಠಿಸುತ್ತಾ, ಅವರ ನಾಮಜಪ ಮಾಡುತ್ತ, ಆ ಬುದ್ಧರುಗಳಿಗೆ ವಂದನೆ ಸಲ್ಲಿಸುತ್ತಾರೆ ಬೌದ್ಧರು. ಬುದ್ಧರ ಪವಿತ್ರ ಗ್ರಂಥಗಳು ಈ ೨೮ ಬುದ್ಧರ ಹೆಸರುಗಳನ್ನು ದಾಖಲಿಸಿವೆ. ಅನೇಕ ಸಾರಿ ಕಾಣಿಸಿಕೊಂಡು ಹಾಗೂ ಚೆದುರಿಹೋದ ಈ ವಿಶ್ವದಲ್ಲಿ ಕಾಣಿಸಿಕೊಂಡ ಅನೇಕ ಬುದ್ಧರನ್ನು ಈಗಿನ ಬುದ್ಧ ಕಂಡುಕೊಂಡಿದ್ದಾನೆ.

ಪ್ರಾಚೀನ ಕಾಲದ ಬುದ್ಧರು ಅಸಂಖ್ಯರು. ಗೊತ್ತಿರುವ ೨೮ ಬುದ್ಧರಲ್ಲಿ ಕೇವಲ ನಾಲ್ಕು ಮಂದಿ ಬುದ್ಧರು ಮಾತ್ರ ವರ್ತಮಾನ ಯುಗಕ್ಕೆ ಸೇರಿದವರು. ಅವರಲ್ಲಿ ಕೊನೆಯವನಾದ ನಾಲ್ಕನೇ ಗೌತಮ ಬುದ್ಧನ ಉಪದೇಶಗಳನ್ನು ನಾವು ಪಾಲಿಸುತ್ತಿದ್ದೇವೆ. ಬರಲಿರುವ ಕಾಲಘಟ್ಟದಲ್ಲಿ, ವರ್ತಮಾನಕಾಲದ ಯುಗದಲ್ಲಿ ಇನ್ನೊಬ್ಬ ಬುದ್ಧ ಕಾಣಿಸಿಕೊಳ್ಳುತ್ತಾನೆ. ಆತನೇ ಮೈತ್ರೇಯಿ ಬುದ್ಧ, ಹಾಗಾಗಿ ವರ್ತಮಾನ ಯುಗದಲ್ಲಿ ಒಟ್ಟು ಐವರು ಬುದ್ಧರಾಗುತ್ತಾರೆ. ಆದ್ದರಿಂದ ಬೌದ್ಧರ ಪ್ರಕಾರ ಈ ಪ್ರಪಂಚ ಸದ್ಯಕ್ಕೆ ಮಾಯವಾಗುವಂಥದಲ್ಲ, ದೀರ್ಘಕಾಲ ಇರುವಂಥದು.

ಬೌದ್ಧರ ಈ ಎಲ್ಲಾ ಬುದ್ಧರಿಗೂ ಭಕ್ತಿಪೂರ್ವಕವಾಗಿ ಗೌರವಾದರಗಳನ್ನು ಸಲ್ಲಿಸುತ್ತಾರೆ. ಈ ಎಲ್ಲ ಬುದ್ಧರೂ ಸ್ವಪ್ರಯತ್ನದಿಂದ ಬೋಧಿಯನ್ನು ಪಡೆದು ನಿರ್ವಾಣ ಹೊಂದಿದವರು. ಎಲ್ಲ ವಿಷಯಗಳಲ್ಲೂ ಅವನಂತೆ ವರ್ತಿಸಿದವರು. ಅವರೆಲ್ಲರೂ ಸಾರ್ವತ್ರಿಕವಾಗಿ ಸತ್ಯ (ಧರ್ಮ) ವನ್ನು ಶಾಕ್ಯಮುನಿ ಬುದ್ಧನಂತೆ ಸಾಕ್ಷಾತ್ಕರಿಸಿಕೊಂಡವರು ಮತ್ತು ಅವನ ಎಲ್ಲ ಗುಣಗಳನ್ನು ಹೊಂದಿದ್ದವರು.

೧. **ವಂದೆ ತಣ್ಹಂಕರಂ ಬುದ್ಧಂ, / ವಂದೆ ಮೇಧಂಕರಂ ಮುನಿಂ, / ಸರಣಂಕರಂ ಮುನಿಂ ವಂದೆ /ದೀಪಂಕರಾ ಜಿನಂ ನಾಮೆ/**
'ಸಂಪೂರ್ಣ ಬೋಧಿಜ್ಞಾನ ಪಡೆದ ತಣ್ಹಂಕರನಿಗೆ, ಶ್ರೇಷ್ಠ ಮುನಿ ಮೇಧಂಕರನಿಗೆ, ಆರ್ಯಋಷಿ ಸರಣಂಕರನಿಗೆ, ನಿಜವಾದ ವಿಜಯಿ ದೀಪಂಕರನಿಗೆ ವಂದಿಸುತ್ತೇನೆ.'

೨. **ವಂದೆ ಕೊಂಡಣ್ಣಾ ಸತ್ಥಾರಂ/ ವಂದೆ ಮಂಗಲ ನಾಯಕಂ / ವಂದೇ ಸುಮನ ಸಂಬುದ್ಧಂ / ವಂದೆ ರೆವತ ನಾಯಕಂ .**

'ಮಹೋಪಾಧ್ಯಾಯ ಕೊಂಡಣ್ಣನಿಗೆ, ಮಹಾನಾಯಕ ಮಂಗಲನಿಗೆ, ಪೂರ್ಣ ಬೋಧಿಜ್ಞಾನ ಪಡೆದ ಸುಮನನಿಗೆ, ಮಹೋನ್ನತ ಮಾರ್ಗದರ್ಶಿಯಾದ ರೆವತನಿಗೆ ನಮಸ್ಕಾರ.'

೩. **ವಂದೆ ಸೊಭಿತಾ ಸಂಬುದ್ಧಂ / ಅನೊಮ ದಸ್ಸಿಂ ಮುನಿಂ ನಮೆ/ ವಂದೆ ಪದುಮ ಸಂಬುದ್ಧಂ / ವಂದೆ ನಾರದ ನಾಯಕಂ.**
'ಪೂರ್ಣ ಬೋಧಿಜ್ಞಾನ ಪಡೆದ ಸೊಭಿತ್ತಾನಿಗೆ, ಮಹರ್ಷಿ ಅನೊಮ ದರ್ಶಿಗೆ, ಪೂರ್ಣ ಬೋಧಿ ಜ್ಞಾನ ಪಡೆದ ಪದುಮನಿಗೆ, ಸರ್ವೋನ್ನತ ಮಾರ್ಗದರ್ಶಿ ನಾರದನಿಗೆ ನಮಸ್ಕಾರ.'

೪. **'ಪದುಮುತ್ತರಂ ಮುನಿಂ ವಂದೆ / ವಂದೆ ಸುಮೆಧ ನಾಯಕಂ/ ವಂದೆ ಸುಜಾತ ಸಂಬುದ್ಧಂ / ಪಿಯದಸ್ಸಿಂ ಮುನಿಂ ನಮೆ.**
'ಪದುಮುತ್ತರ ಪ್ರಶಾಂತಮುನಿಗೆ, ಮಹಾನಾಯಕ ಸುಮೆದನಿಗೆ, ಪೂರ್ಣ ಬೋಧಿಜ್ಞಾನ ಪಡೆದ ಸುಜಾತಗೆ, ಮಹರ್ಷಿ ಪಿಯದರ್ಶಿಗೆ ನಮಸ್ಕಾರ.'

೫. **ಅತ್ಥದಸ್ಸಿಂ ಮುನಿಂ ವಂದೆ / ವಂದೆ ಸಿದ್ದತ್ಥಂ ಸತ್ಥಾರಂ / ವಂದೆ ತಿಸ್ಸಾಮಹಾಮುನಿಂ.**
'ಮಹರ್ಷಿ ಅತ್ಥದಸ್ಸಿಗೆ, ನಿಜವಾದ ವಿಜಯಶಾಲಿ ಧಮ್ಮದಸ್ಸಿಗೆ ಪವಿತ್ರ ಗುರು ಸಿದ್ಧತ್ಥನಿಗೆ ನಮಸ್ಕಾರ.'

೬. **ವಂದೇ ಪುಸ್ಸ ಮಹಾವೀರಂ/ ವಂದೇ ವಿಪಸ್ಸೀನಾಯಕಂ/ ಸಿಖಿಂ ಮಹಾಮುನಿಂ ವಂದೇ / ವೆಸ್ಸಬು ನಾಯಕಂ ವಂದೆ /**
'ಮಹಾನಾಯಕ ಪುಸ್ಸನಿಗೆ, ಪವಿತ್ರ ಮಾರ್ಗದರ್ಶಿ ವಿಪಸ್ಸಿಗೆ, ಮಹರ್ಷಿ ಸಿಖಿಗೆ, ನಿಜವಾದ ನಾಯಕ ವೆಸ್ಸಬುಗೆ ನಮಸ್ಕಾರ.'

೭. **ಕಕುಸಂಧಂ ಮುನಿಂ ವಂದೆ/ ವಂದೆ ಕೊನಾಗಮನ ನಾಯಕಂ/ ಕಸ್ಸಪಂ ಸುಗತಂ ವಂದೆ/ವಂದೆ ಗೊತಮ ನಾಯಕಂ/**
'ಪ್ರಶಾಂತ ಕಕುಸಂಧನಿಗೆ, ಪವಿತ್ರ ಮಾರ್ಗದರ್ಶಕ ಕೊನಾಗಮನನಿಗೆ, ಮಹೋನ್ನತ ಕಸ್ಸಪನಿಗೆ, ಆರ್ಯಮಾರ್ಗದರ್ಶಕ ಗೊತಮನಿಗೆ ನಮಸ್ಕಾರ.'

೮. **ಅಟ್ಠವೀಸತಿ ಇಮೆ ಬುದ್ಧಾ/ನಿಬ್ಬಾನ ಮತ ನಾಯಕ/ ನಮಾಮಿ ಸಿರಸಾ ನಿಚ್ಚಂ/ತೆ ಮಂ ರಕ್ಖಂತಾ ಸಬ್ಬದಾ/**

ಈ ೨೮ ಮಂದಿ ಬುದ್ಧರು ಸರ್ವೋನ್ನತ ಬೋಧಿಜ್ಞಾನ (ಬೆಳಕು) ಪಡೆದವರು. ಶಾಶ್ವತ ನಿಬ್ಬಾನ ನೀಡುವವರು! ಕಣ್ಣುಬ್ಬಿ ನೊಂದಿಗೆ (ಸಿರಸಾ) ಸದಾ ಸಾಷ್ಟಾಂಗ ನಮಸ್ಕಾರ ಮಾಡಿಸಿ ಕೊಳ್ಳುವವರು ಆದ ೨೮ ಬುದ್ಧರು ಸದಾ ನಮ್ಮನ್ನು ರಕ್ಷಿಸುತಿರಲಿ.

ಹೀಗೆ ಅಸಂಖ್ಯ ಬುದ್ಧ ನಾಮಜಪಗಳು ಬೌದ್ಧಧರ್ಮದಲ್ಲಿ ಇವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಡಲಾಗಿದೆ. ಬೆಳಿಗ್ಗೆ ಸಂಜೆ ಎಲ್ಲಾ ಪೂಜಾಸಮಯಗಳಲ್ಲಿ ಬೌದ್ಧಭಿಕ್ಷು-ಭಿಕ್ಷುಣಿಯರು, ಉಪಾಸಕರು ಬುದ್ಧನ ನಾಮಜಪ ಮಾಡುತ್ತಾರೆ. ಈ ಎಲ್ಲರೂ ತಮ್ಮ ಮನಸ್ಸಿನಲ್ಲಿ ಉಂಟಾಗುವ ಭಯ,ಆತಂಕ,ಮಾನಸಿಕ ಪಾಪಗಳು ಇತ್ಯಾದಿಗಳನ್ನು ನಿವಾರಿಸಿಕೊಂಡು ಪುಣ್ಯಸಂಚಯನ ಮಾಡುತ್ತಾ ನಿಬ್ಬಾನದೆಡೆಗೆ ಹೋಗಲು ಬೇಕಾದ ಮನಶುದ್ಧಿಯನ್ನು ಸಂಪಾದಿಸಿಕೊಳ್ಳುತ್ತಾರೆ.

# ಇಸ್ಲಾಂ ಧರ್ಮದಲ್ಲಿ ನಾಮಸ್ಮರಣೆ

**ಸಮೀರ್**



**ಎಲ್ಲ ಧರ್ಮಗಳಲ್ಲೂ ನಾಮಜಪಕ್ಕೆ ಮಹತ್ವ ನೀಡಲಾಗಿರುವಂತೆಯೇ, ನಿರಾಕಾರ-ನಿರ್ಗುಣ ಭಾವದ ಉಪಾಸನೆಯೇ ಪ್ರಧಾನವಾಗಿರುವ ಇಸ್ಲಾಂ ಧರ್ಮದಲ್ಲೂ ಭಗವಂತನ ನಾಮಸ್ಮರಣೆ ಆಧ್ಯಾತ್ಮಿಕ ಸಾಧನೆಯ ಅಂಗವಾಗಿದೆ. ಲೇಖಕರು ಮೈಸೂರು ನಿವಾಸಿಗಳು ಹಾಗೂ ಔಷಧಿ ವಿತರಕರು. ಉಪನಿಷತ್ತು , ಗೀತೆ, ಕುರಾನ್‌ಗಳನ್ನು ಆಳವಾಗಿ ಅಭ್ಯಸಿಸಿರುವ ಅವರು ಧಾರ್ಮಿಕವಾಗಿ ವಿಶಾಲಭಾವನೆಯನ್ನು ಮೈಗೂಡಿಸಿಕೊಂಡಿದ್ದಾರೆ.**

ಇಸ್ಲಾಂ ಎಂದರೆ ಪರಮದೇವನಾದ ಅಲ್ಲಾಹ್‌ನಲ್ಲಿ ಸಂಪೂರ್ಣ ಶರಣಾದವನು ಎಂದು ಅರ್ಥ. ಅಲ್ಲಾಹ್‌ನಿಗೆ ರೂಪವಿಲ್ಲ, ನಿರಾಕಾರ.

ಅಂದ ಮೇಲೆ ದೈವಭಕ್ತಿ, ದೈವನಿಷ್ಠೆ ಬಗ್ಗೆ ಹೇಳಬೇಕಾದ್ದೇ ಇಲ್ಲ. ಆತ ಮಾಲೀಕ. ಎಲ್ಲ ಜೀವಿಗಳೂ ಆತನ ದಾಸರು. ವಿಶ್ವಕ್ಕೆಲ್ಲ ಅಲ್ಲಾಹ್ ಒಬ್ಬನೆ ದೇವರು. ಅದ್ವಿತೀಯ, ಸರ್ವಶಕ್ತ, ಸರ್ವಜ್ಞಾನದ ಮೂಲ. ಅವನು ಎಲ್ಲೆಲ್ಲಿಯೂ ಇದ್ದಾನೆ. ಅವನಿಗೆ ರೂಪವಿಲ್ಲ ನಿರಾಕಾರ. ಆದರೆ ಸರ್ವಶ್ರೇಷ್ಠ ಗುಣಗಳೂ ಅವನಲ್ಲಿವೆ. ಆ ಗುಣಗಳೆಲ್ಲ ಅವನಿಂದಲೇ ಮನುಷ್ಯರಿಗೆಲ್ಲ ಬಂದಿವೆ! ಆ ಗುಣಗಳನ್ನು ಸ್ಮರಿಸುತ್ತ ಅಲ್ಲಾಹ್(ಕರುಣಾಮಯ)ನ ಗುಣಗಾನ ಮಾಡುವವರು ಆತನಿಗೆ ಪ್ರಿಯರಾಗುತ್ತಾರೆ. ತಿಳಿದೋ ತಿಳಿಯದೆಯೋ ಅವರು ಮಾಡಿದ ಎಲ್ಲಾ ತಪ್ಪುಗಳನ್ನೂ ಕ್ಷಮಾಶೀಲನಾದ ಅಲ್ಲಾಹ ಕ್ಷಮಿಸಿ ತಪ್ಪು ಮಾಡದ ಸತ್ಪಥದಲ್ಲಿ ಅವರನ್ನು ನಡೆಸುತ್ತಾನೆ.

ಕುರ್‌ಆನ್ ಮುಸ್ಲಿಮರ ಪವಿತ್ರಗ್ರಂಥ, ಅದು ದೈವವಾಣಿ. ಅಜ್ಞಾನದ ಕತ್ತಲಲ್ಲಿ ತಡಕಾಡುತ್ತಿರುವವರಿಗೆ ಮಾರ್ಗದರ್ಶಿ ಬೆಳಕು. (ಕುರ್‌ಆನ್ ಅಧ್ಯಾಯ ೩೩ ಅಲ್‌ಅಹ್‌ಝಾಬ್, ಅಯತ್, ಶ್ಲೋಕ ೪೧-೪೨ ರಲ್ಲಿ ದೈವ ಭಕ್ತರೇ, ಅಲ್ಲಾಹ್‌ನನ್ನು ಹಗಲಿರುಳೆನ್ನದೆ ಸದಾಗುಣಗಾನ ಮಾಡುತ್ತಾ ಸ್ಮರಿಸಿರಿ. ನಿಮ್ಮೆಲ್ಲ ಕಷ್ಟಗಳೂ ಪರಿಹಾರವಾಗುವುವು ಎಂದಿದೆ.) ಈ ಶ್ಲೋಕದ ಬಗ್ಗೆ ಹಜರತ್ ಅಬ್ದುಲ್ಲಾ ಇಬ್ನೆ ಅಬ್ಬಾಸ್(ರ.ಅ) ವ್ಯಾಖ್ಯಾನ ಮಾಡುತ್ತಾ ಅಲ್ಲಾಹ್‌ನು ಪ್ರಾರ್ಥನೆ, ವ್ರತ ಮುಂತಾದ ಧಾರ್ಮಿಕ ಕಾರ್ಯಗಳಿಗೆ ಮಿತಿಯನ್ನು ಹಾಕಿದ್ದಾನೆ. ದೈನಂದಿನ ಪ್ರಾರ್ಥನೆಯನ್ನು ಐದು ಸಲಕ್ಕೆ, ರಂಜಾನ್ ಉಪವಾಸವನ್ನು ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ, ಅದು ವರ್ಷದಲ್ಲಿ ಇಂಥಾ ಒಂದು ತಿಂಗಳು ಮಾತ್ರ ಎಂದು, ಝಕಾತ್ ವರ್ಷಕ್ಕೊಮ್ಮೆ ವರಮಾನದಲ್ಲಿ ಒಂದು ಬಾರಿ ಎಂದು ನಿಗದಿಗೊಳಿಸಿದ್ದಾನೆ. ಆದರೆ ತನ್ನ ನಾಮಸ್ಮರಣೆಗೆ ಯಾವ ಮಿತಿ-ನಿರ್ಬಂಧಗಳನ್ನೂ ಹಾಕಿಲ್ಲ. ಗುಣ(ನಾಮ) ಸ್ಮರಣೆಯನ್ನು ಎಲ್ಲೆಂದರಲ್ಲಿ ಬೇಕಾದರೂ ಮಾಡಬಹುದಾಗಿದೆ. ಆರೋಗ್ಯವಾಗಿರಲಿ, ಅನಾರೋಗ್ಯದಲ್ಲೇ ಇರಲಿ ಅಲ್ಲಾಹ್‌ನ ನಾಮ ಸ್ಮರಣೆ ಮಾಡಬಹುದು.

ಪ್ರವಾದಿವರನ ಮತ್ತೊಂದು ವಚನ ಸ್ಮರಣೆ, ಪ್ರಾರ್ಥನೆಗಳಿಗೆ ಖಂಡಿತ ಫಲ ದೊರೆತೇ ದೊರೆಯುತ್ತದೆ ಎಂದು ಆಶ್ವಾಸನೆ ನೀಡುತ್ತದೆ. ಅಲ್ಲಾಹ್‌ನ ನಾಮಸಂಕೀರ್ತನೆಯಲ್ಲಿ ಅತ್ಯುನ್ನತವಾದುದು ಲಾ-ಇಲ್ಲಾಹ್ ಇಲ್ಲಾಲ್ಲಾಹ್ ('ಅಲ್ಲಾಹ್‌ನ ಹೊರತು ಬೇರಾರೂ ಆರಾಧನೆಗೆ ತಕ್ಕವರಲ್ಲ') ಪ್ರಾರ್ಥನೆಯಲ್ಲಿ ಕ್ಷಮಾಪರಾಧದ ಮಾತಿದೆ. ಅಸ್ತಗ್ ಫಿರುಲ್ಲಾಹ್ ('ಓ ದೇವಾ ನನ್ನ ಪಾಪಗಳನ್ನು ಕ್ಷಮಿಸು') ಕುರ್‌ಆನ್‌ನ ಈ ಎಲ್ಲ ಶ್ಲೋಕಗಳಿಂದ, ಪ್ರವಾದಿಯವರ ಮಾತಿನಿಂದ ಹಜರತ್‌ರವರ ವ್ಯಾಖ್ಯಾನದಿಂದ ಅಲ್ಲಾಹ್‌ನ ನಾಮಸ್ಮರಣೆ ಮಹತ್ವ ವ್ಯಕ್ತವಾಗುತ್ತದೆ.

ಇಸ್ಲಾಂ ಧರ್ಮದವರಲ್ಲಿ ಸಾಧಕ ಭಕ್ತರು ಅಲ್ಲಾಹ್‌ನ ೯೯ ಸದ್ಗುಣಗಳನ್ನು ಅನೇಕಬಾರಿ ಸ್ಮರಿಸುವ ಅನುಕೂಲಕ್ಕಾಗಿ, ಎಣಿಕೆಯ ಸೌಲಭ್ಯಕ್ಕಾಗಿ, ಅಷ್ಟು ಸಂಖ್ಯೆಯ ಮಣಿಗಳಿರುವ (ಜಪ)ಸರವನ್ನು ಇಟ್ಟುಕೊಂಡಿರುತ್ತಾರೆ. ಗಂಡಸರು, ಹೆಂಗಸರು, ಪ್ರಾಯದವರು, ಮುದುಕರು ಎಂಬ ಭೇದವಿಲ್ಲ. ಆದರೆ ಹೆಂಗಸರು ಹೊರಗಾದಾಗ ಮೂರು ದಿನಗಳ ಮೈಲಿಗೆಯ ಕಾರಣ ಜಪಮಾಲೆಯನ್ನು ಹಿಡಿದು ನಾಮಸ್ಮರಣೆ ಮಾಡುವ ಹಾಗಿಲ್ಲ ಎಂಬೊಂದು ಧಾರ್ಮಿಕ ಕಟ್ಟಲೆ ಬಿಟ್ಟರೆ ಉಳಿದ ಎಲ್ಲ ಕಾಲದಲ್ಲೂ ಜಪಮಾಡಲು ಅಭ್ಯಂತರವಿಲ್ಲ.

ಇಸ್ಲಾಂ ಧರ್ಮದಲ್ಲಿ ಅಲ್ಲಾಹ್‌ನ ಗುಣಗಾನದ (ಜಪದ) ಮೊದಲ ಮೂವತ್ತೊಂದು ಸದ್ಗುಣಗಳನ್ನಿಲ್ಲಿ ಉದಾಹರಿಸಿದೆ:-

೧. ಅಲ್ ಅಹದ್ (ಏಕಮಾತ್ರ - ಎರಡನೆಯವರಿಲ್ಲ) ೨. ಅಸ್ಸಮದ್ (ಅವನೇ ಎಲ್ಲರಿಗೂ ಆಸರೆ, ಆತ ಮಾತ್ರ ನಿರಾವಲಂಬಿ.) ೩. ಅಲ್ ರಝ್ಝಾಖು (ಅವನು ಕೊಡುವ ಆಹಾರ ಅಕ್ಷಯವಾದುದು) ೪. ರಬ್ ಪಾಲನೆ-ಪೋಷಣೆ ಮಾಡುವವನು (ಎಲ್ಲರನ್ನೂ ರಕ್ಷಿಸುವವನು - ಪೋಷಿಸುವವನು ಅವನೇ) ೫. ರಹಮಾನ್ (ಪರಮ ದಯಾಳು) ೬. ಅಲ್ ಮುಮೀತ್ (ಮೃತ್ಯುವನ್ನು ದಯಪಾಲಿಸುವವನು ಆತನೇ ಲಯಕರ್ತ) ೭. ಅಲ್ ಖ಼ಾದಿರು (ಅವನೇ ಸರ್ವಸಮರ್ಥ) ೮. ಅಲ್ ಅಝ್ಝೀಝು (ಸರ್ವ ಶಕ್ತ) ೯. ಅಲ್ ಖ಼ಾಲಿಖು (ಅವನೇ ಪ್ರಾಣದಾತ) ೧೦. ಅಲ್ ಬದೀವು (ಅವನೇ ಪ್ರಥಮ ಸೃಷ್ಟಿಕರ್ತ) ೧೧. ಅಲ್ ಹಕೀಮು (ಅವನೇ ಸರ್ವರೋಗ ನಿವಾರಕ ವೈದ್ಯ) ೧೨. ಅಸ್ಸಮೀಉ (ಅವನ ಶ್ರವಣ ಶಕ್ತಿ ಬಹು ಸೂಕ್ಷ್ಮ. ನಮ್ಮ ಅಂತರಂಗದ ಪ್ರಾರ್ಥನೆಯೂ ಕೇಳುತ್ತದೆ.)